## ಭಗವಂತನು ಯಾರನ್ನೂ ಕೈಬಿಡಲಾರ

ಭಗವಂತನನ್ನು ಅರಿತುಕೊಂಡು ಸಾಕ್ಷಾತ್ಕಾರ ಪಡೆಯುವ ಗುರಿ ಹೊಂದಿರುವವರನ್ನು ಭಗವಂತ ಎಂದಿಗೂ ಕೈಬಿಡುವುದಿಲ್ಲ. ನಮ್ಮ ಗುರಿಯಲ್ಲಿರುವ ಹಠವೇ ಅದರ ವಿಜಯದ ರಹಸ್ಯ.

ಹಗಲನ್ನು ಭಗವಂತನ ಧ್ಯಾನದಲ್ಲಿ ಪ್ರಯೋಜನಪಡಿಸಿಕೊಂಡರೆ ರಾತ್ರಿ ಶುಭಕರವಾಗಿಯೇ ಪರಿಣಮಿಸುತ್ತದೆ.

## ಸುಭಾಷಿತ

ಈ ಜೀವನದಲ್ಲಿ ದೊರೆತಿರುವ ಪ್ರತಿಯೊಂದು ವಸ್ತುವೂ ಐಶ್ವರ್ಯವಾಗಲಾರದು. ಆದರೆ ಅಂತರಂಗದಲ್ಲಿ ಭಗವಂತನನ್ನು ಧ್ಯಾನ ಮಾಡುವುದು ಬಹು ದೊಡ್ಡ ಐಶ್ವರ್ಯವಾಗುತ್ತದೆಂಬುದನ್ನು ಎಂದೆಂದೂ ಮರೆಯದಿರಿ.


ದೀಪೋತ್ಸವ, ಪ್ರದೋಷ, ಗಿರಿ ಪರ್ಯಟನೆ, ಪಾದಯಾತ್ರೆ ಮುಂತಾದ ಆಚರಣೆಗಳ ವಿಧಿ ವಿಧಾನಗಳನ್ನು ವಿವರಿಸುವ, ಅವುಗಳಿಂದ ದೊರೆಯುವ ಉತ್ತಮ ಫಲ ಇತ್ಯಾದಿಗಳಲ್ಲದೆ ಶುಭ ಕಾರ್ಯದಂದು ಆಶೀರ್ವಾದ ಮಾಡುವ ಕ್ರಮ, ಆಸ್ತಿಕತೆಯ ಪ್ರಶ್ನೋತ್ತರ, ಆತ್ಮಶ್ರೇಯಸ್ಸು ಪಡೆಯಲು ಸಲ್ಲಿಸಬೇಕಾದ ಪ್ರಾರ್ಥನಾ ವಿಧಿಗಳು ಒಳಗೊಂಡಿರುವ ಪುಸ್ತಕ.

ಉತ್ತಮ ಆಧ್ಯಾತ್ಮಿಕ ಜೀವನಕ್ಕೆ ಹಿಂದೂ ಧರ್ಮದ ಮಾರ್ಗದರ್ಶನ ಪುಸ್ತಕದ ಬೆಲೆ ರೂ. 10/-

ಯುವಜನರ ಮುನ್ನಡೆಗಾಗಿ ಹಿಂದೂ ಧರ್ಮವು ಬೋಧಿಸುವ ವಿಧಿವಿಧಾನಗಳು : ಬೆಲೆ ರೂ. 10/-



**ಹಿಂದೂ ಯುವಜನ ಆಸ್ತಿಕ ಸೇವಾ ಸಂಘ**

**HINDU YOUTH SPIRITUAL SEVA SANGAM**

&

**ಹಿಂದೂ ಸಂಘಟನಾ ಜಾಗೃತಿ ಪರಿಷತ್ತು**

**HINDU UNITED PROGRESSIVE MOVEMENT**

Dhuraimurugar Shiva Meditation Sabha,
Palani-Dindigul Main Road, Kanakkanpatti Post,
PALANI, DINDIGUL Dist. - 624 613, TAMILNADU.

ವೆಬ್ ಸೈಟ್ : www.templedivinesuccess.com & www.hinduupm.co.in
ಭಗವಂತನ ಸೇವೆಗೈಯಲು ಸಂಪರ್ಕಿಸಿ : karnatakahinduupm@gmail.com


ಈ ಪ್ರತಿಯನ್ನು ಪ್ರತಿಯೊಬ್ಬರೂ ಓದಿ ಭಕ್ತಿಮಾರ್ಗದಲ್ಲಿ ಶ್ರೇಯಸ್ಸು ಪಡೆಯಲು ಹಾಗೂ ಮುದ್ರಿಸಿ ಹಂಚಲು ಸಂಪರ್ಕಿಸಿ:

ಓಂ ನಮಃ ಶಿವಾಯ

HINDU UPM
Regd : 185/4-2012    www.hinduupm.co.in

# ಶ್ರೇಷ್ಠವಾದ ಹಿಂದೂ ಧರ್ಮ ಬೋಧಿಸುವ ಪೂಜಾವಿಧಿಗಳು ಸಫಲರಾಗಲು ಅನುಸರಿಸಬೇಕಾದ ವಿಧಾನಗಳು

## WAY TO SUCCESSFUL PRAYER

**ದೇಹವನ್ನು ಬೆಳೆಸುವುದು ಆಹಾರವಾದರೆ**
**ಆತ್ಮವನ್ನು ಉನ್ನತಿಗೇರಿಸುವುದು ಧಾರ್ಮಿಕ ಚಿಂತನೆಗಳು**

## ದೇವಾಲಯಗಳಿಗೆ ಏಕೆ ಹೋಗಬೇಕು?

ನಾವು ಈಜಬೇಕಾದರೆ ಈಜುಕೊಳಕ್ಕೆ ಇಲ್ಲವೆ ಕೆರೆಗೆ ಹೋಗಬೇಕಲ್ಲವೇ? ಹಾಗೆಯೇ ಭಕ್ತಿಯನ್ನು ಬೆಳೆಸಿಕೊಳ್ಳಬೇಕಾದರೆ ದೇವಾಲಯಕ್ಕೆ ಹೋಗಬೇಕು.

ಅವರವರಿಗೆ ಪ್ರಿಯವೆನಿಸಿದ ದೇವಾಲಯವನ್ನು ಮನಸ್ಸಿನಲ್ಲಿಯೇ ಪ್ರತಿಷ್ಠಾಪಿಸಿ ಮಂತ್ರವನ್ನು ಜಪಿಸುತ್ತಾ ಹೂವುಗಳನ್ನು ಅರ್ಪಿಸುವುದರ ಮೂಲಕ ಭಗವಂತನನ್ನು ಪೂಜಿಸಬೇಕು. ಪ್ರತಿದಿನ ದೇವಾಲಯಕ್ಕೆ ಹೋಗುವುದರಿಂದ ನಮ್ಮ ಅಂತರಂಗದಲ್ಲಿ ದೇವಾಲಯವು ನಿರಂತರವಾಗಿ ನಿಲ್ಲುವುದು. ಇದು ನಿಮ್ಮ ವಿಜಯಕ್ಕೆ ಆಧಾರಸ್ತಂಭವಾಗುತ್ತದೆ.

ಜೀವನದಲ್ಲಿ ವಿಜಯವನ್ನುಸಾಧಿಸಲು ನಿಮಗೆ ಪ್ರಿಯವಾದ ದೇವಾಲಯವನ್ನು ನೆನೆಯುತ್ತಾ

**ಮನಸ್ಸಿನಲ್ಲಿ ಅನುದಿನವೂ ಜಪಿಸಬೇಕಾದ ಮಂತ್ರ**

**ಓಂ ನಮಃ ಶಿವಾಯ ನಮೋ ನಮಃ**
**ಓಂ ಸಚ್ಚಿದಾನಂದಾಯ ನಮೋ ನಮಃ**
**ಓಂ ಸದ್ಗುರುನಾಥಾಯ ನಮೋ ನಮಃ**

## ದೇವಮಂತ್ರದ ಮಹಿಮೆ

ಮಂತ್ರವನ್ನು ಹೇಳಿ ಮಾಡುವ ಕೆಲಸ ಸಫಲವಾಗುವುದು. ಹಾಗೆಯೇ ಮಂತ್ರವನ್ನು ಹೇಳುತ್ತಾ ಮುಂದುವರೆದರೆ ನಮ್ಮ ಸಮಸ್ಯೆಗಳು ದೂರವಾಗುತ್ತವೆ. ಅದರಿಂದ ವಿಸ್ಮಯಕರವಾದ ಘಟನೆಗಳು ಸಂಭವಿಸುತ್ತವೆ. ಆದ್ದರಿಂದ ಮಂತ್ರದ ಪಠಣ ನಿಲ್ಲಿಸದೆ ಮುಂದುವರಿಸಿರಿ.

## ಭಗವಂತನಲ್ಲಿ ಭಕ್ತಿ ಏತಕ್ಕಾಗಿ?

ವಿದ್ಯೆ ಮತ್ತು ವೃತ್ತಿಯಲ್ಲಿ ಉನ್ನತಿಗೇರಲು ಮತ್ತು ತೊಂದರೆಗಳನ್ನು ಪರಿಹರಿಸಿಕೊಳ್ಳಲು ಬಹಳ ಮಂದಿ ಭಗವಂತನಲ್ಲಿ ಮೊರೆ ಹೋಗುತ್ತಾರೆ. ಹಾಗೆಯೇ ಕೆಲವರು ಜ್ಞಾನಿಗಳಾಗಲು ಮತ್ತು ಉತ್ತಮ ಚಿಂತನೆಗಳನ್ನು ಅಳವಡಿಸಿಕೊಳ್ಳಲು ಮೂಲ ಮಂತ್ರವನ್ನು ಜಪಿಸಿ ದೇವರಲ್ಲಿ ಭಕ್ತಿಯನ್ನು ಪ್ರಕಟಪಡಿಸುತ್ತಾರೆ.

ಭಗವಂತನಲ್ಲಿ ಭಕ್ತಿ ತೋರುವುದರಿಂದ ಹಾಗೂ ಮಂತ್ರವನ್ನು ಜಪಿಸಿ ಭಗವಂತನನ್ನು ಮತ್ತೆ ಮತ್ತೆ ನೆನೆಯುವುದರಿಂದ ಉದ್ದೇಶಿಸಿದ ಕಾರ್ಯ ನೆರವೇರುವುದು.

**ಭಗವಂತನಲ್ಲಿ ಪ್ರಾರ್ಥನೆ ಮಾಡುವ ಉದ್ದೇಶವನ್ನು ತಿಳಿದುಕೊಂಡವರು ಯಾವ ಸಮಸ್ಯೆಗೂ ಹೆದರುವುದಿಲ್ಲ**

KANNADA

## ಈ ಲೋಕದ ನಾಲ್ಕು ಬಗೆಯ ಭಕ್ತರು ಯಾರು?

1. ಮುಕ್ತಿಯನ್ನೇ ಗುರಿಯಾಗಿರಿಸಿಕೊಂಡಿರುವ ಜ್ಞಾನಿ
2. ಸಾಂಸಾರಿಕ ಜೀವನ ಉತ್ತಮವಾಗಿರಲಿ ಎಂದು ಬೇಡುವ ಭಕ್ತ
3. ರೋಗರುಜಿನಗಳು ಗುಣಮುಖವಾಗಲಿ ಎಂದು ಪ್ರಾರ್ಥನೆ ಮಾಡುವವರು
4. ಶ್ರೀಮಂತರಾಗಬೇಕೆಂದು ಬೇಡುವವರು

## ಮಾನವರಲ್ಲಿ ಶ್ರೇಷ್ಠರಾದವರು ಯಾರು?

ಉದಾತ್ತ ಚಿಂತನೆಗಳು ಸಜ್ಜನರ ಮೂಲಕ ಬಂದಾಗ ನಾವು ಕಳೆದುಕೊಂಡ ವಸ್ತು ಪುನಃ ನಮಗೆ ದೊರೆಯಿತೆಂದು ತಿಳಿದು ಅದನ್ನು ಮನದಾಳದಲ್ಲಿರಿಸಿಕೊಂಡು ಪ್ರತಿಪಾದಿಸುವವರೇ ಶ್ರೇಷ್ಠವಾದವರು.

## ಕರ್ಮಯೋಗಿ ಯಾರು?

ಕಾರನ್ನು ಓಡಿಸುವವರು ಹೇಗೆ ಹಾಡನ್ನು ಆಲಿಸುತ್ತಾ ಕಾರನ್ನು ಚಲಿಸುತ್ತಾರೆಯೋ ಹಾಗೆಯೇ ಭಗವಂತನನ್ನು ನೆನೆಯುತ್ತಾ ತನ್ನ ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸುವಂತಹವರೇ ಕರ್ಮಯೋಗಿಗಳು.

## ಭಗವಂತನಿಂದ ಆರು ಬಗೆಯ ಅತಿಶಯ ಗುಣಗಳನ್ನು ಪಡೆಯುವ ವಿಧಾನ

ಸಾಕ್ಷಾತ್ ಶಿವನೇ ಭಗವಂತ. ಆರು ಗುಣಗಳುಳ್ಳವನು ಎಂಬ ಅರ್ಥವೂ ಇದಕ್ಕಿದೆ. ಭಗವಂತನಾದ ಶಿವನನ್ನು ಹೃತ್ಪೂರ್ವಕವಾಗಿ ಪೂಜಿಸುವವರಿಗೆ ಭಗವಂತನಲ್ಲಿರುವ ಆರು ಅತಿ**ಶಯ** ಗುಣಗಳು ಲಭಿಸುತ್ತವೆ. ಜ್ಞಾನ, ಐಶ್ವರ್ಯ, ಶಕ್ತಿ, ಬಲ, ವೀರ್ಯ ಮತ್ತು ತೇಜಸ್ಸು ಇವೇ ಆರು ಅತಿ**ಶಯ** ಗುಣಗಳು.

## ಶಿವಧರ್ಮವೆಂದರೇನು?

1. ಕೊಲ್ಲದಿರುವುದು
2. ನಿಂದನೆಗೆ ಹೆದರುವುದು
3. ತಾಳ್ಮೆ
4. ಸತ್ಕಾರ್ಯ
5. ಹೃದಯಪೂರ್ವಕ ಪ್ರೀತಿ
6. ದಾನಶೀಲತೆ
7. ಶಿವ (ಸಚ್ಚಿದಾನಂದ)ನನ್ನು ಪೂಜಿಸುವುದು
8. ಪುಣ್ಯದ ಕಾರ್ಯ ಮಾಡುವುದು
9. ಶಿವನನ್ನು ಮನಸಾರೆ ಧ್ಯಾನ ಮಾಡುವುದು

## ಪುಣ್ಯ ಪಡೆಯುವ ಶುಭ ದಿನಗಳು

ಶಿವ ದೇವಾಲಯಗಳಲ್ಲಿ ಪ್ರತಿ ಸೋಮವಾರ, ಶಿವರಾತ್ರಿ, ಪ್ರದೋಷ ಮುಂತಾದ ಪುಣ್ಯ ದಿನಗಳಲ್ಲಿ ಭಗವಂತನನ್ನು ಪೂಜಿಸುವುದು. ಅನ್ನದಾನ ಮಾಡುವವರಿಗೆ ಪಾಪಗಳು ಪರಿಹಾರವಾಗುತ್ತವೆ, ರೋಗರುಜಿನಗಳಿಂದ ಮುಕ್ತರಾಗುತ್ತಾರೆ. ಪುಣ್ಯಾತ್ಮರಾಗುತ್ತಾರೆ, ಸಕಲೈಶ್ವರ್ಯವನ್ನು ಪಡೆದು ಭಗವಂತನ ಸಾನ್ನಿಧ್ಯವನ್ನು ಸುಲಭವಾಗಿ ಪಡೆಯುತ್ತಾರೆ.

**ಮನಸ್ಥೈರ್ಯವುಳ್ಳವರು ಹಾಗೂ ಭಗವಂತನನ್ನು ಧ್ಯಾನಿಸುವವರು ಉತ್ತಮ ಸಮಾಜ ನಿರ್ಮಾಪಕರಾಗುತ್ತಾರೆ.**

## ನಿರ್ಲಕ್ಷ್ಯದ ಪರಿಣಾಮ

1. ಕೆಲಸದಲ್ಲಿ ಗಮನವಿಲ್ಲದಾಗ – ನಷ್ಟವುಂಟಾಗುತ್ತದೆ.
2. ಮಾತಿನಲ್ಲಿ ಗಮನವಿಲ್ಲದಾಗ – ದ್ವೇಷವುಂಟಾಗುತ್ತದೆ
3. ದೇಹದಲ್ಲಿ ಗಮನವಿಲ್ಲದಾಗ – ಪ್ರಾಣಕ್ಕೆ ಆಪತ್ತು
4. ಧ್ಯಾನದಲ್ಲಿ ಗಮನವಿಲ್ಲದಾಗ – ಮನಸ್ಸು ಚಂಚಲವಾಗುವುದು

## ಆತ್ಮವಿಶ್ವಾಸ

ಏನೇ ಆಗಲಿ, ಜೀವನದಲ್ಲಿ ಆತ್ಮವಿಶ್ವಾಸ ಎಂಬುದು ಧ್ಯಾನದಲ್ಲಿ ಹಾಗೂ ವಸ್ತು ಸಂಗ್ರಹ ಮಾಡುವುದರಲ್ಲಿ ಕಡ್ಡಾಯವಾಗಿ ಇರಬೇಕು. ಇಂತಹ ಆತ್ಮವಿಶ್ವಾಸ ಮತ್ತು ಏಕಾಗ್ರಚಿತ್ತದಿಂದ ಭಗವಂತನನ್ನು ಧ್ಯಾನಿಸಿದರೆ ಅಂತಹವರನ್ನು ಭಗವಂತ ಎಂದಿಗೂ ಕೈಬಿಡಲಾರ. ಅವರಿಗೆ ಸಕಲೈಶ್ವರ್ಯ ಹಾಗೂ ಆಶೀರ್ವಾದ ಪ್ರಾಪ್ತವಾಗುತ್ತದೆ.

## ಜ್ಞಾನ

**"ಈ ಲೋಕದಲ್ಲಿ ಜ್ಞಾನಕ್ಕಿಂತ ಮಿಗಿಲಾದದ್ದು ಯಾವುದೂ ಇಲ್ಲವೆಂದು ಅನೇಕ ಮಹಾತ್ಮರು ಹೇಳಿದ್ದಾರೆ.**

**ಜ್ಞಾನದಿಂದಲಿ ಇಹವು ಜ್ಞಾನದಿಂದಲಿ ಪರವು**
**ಜ್ಞಾನವಿಲ್ಲದಿರೆ ಸಕಲವೂ ತನಗಿದ್ದು**
**ಹಾನಿ ಕಾಣಯ್ಯ ಸರ್ವಜ್ಞ – ಎಂಬ ನುಡಿ ಎಂದಿಗೂ ಮರೆಯುವಂತಿಲ್ಲ.**

"ಆನೆ ಕನ್ನಡಿಯೊಳಗೆ ಹೇಗೆ ಅಡಗಿರುತ್ತದೆಯೋ ಹಾಗೆಯೇ ಜ್ಞಾನಿಯ ಹೃದಯದಲ್ಲಿ ಪರಿಶಿವನು ಅಡಗಿರುತ್ತಾನೆ" ಎಂದು ಜ್ಞಾನದ ಮಹತ್ವವನ್ನು ಕವಿ ಹೇಳುತ್ತಾನೆ. ಈ ಭೂಲೋಕದಲ್ಲಿ ಹುಟ್ಟಿರುವುದು ದೇಹದ ಅಂತರಂಗದಲ್ಲಿ ನೆಲೆಸಿರುವ ಆನಂದ ಸಭೆಯ ಭಗವಂತನನ್ನು ಧ್ಯಾನದ ಮೂಲಕ ಕಂಡು ಜೀವನದಲ್ಲಿ ಉನ್ನತಿಯನ್ನು ಪಡೆಯುವುದೇ ಆಗಿದೆ.

**ಬೆಂಕಿಯನ್ನು ಹೊಗೆ ಮುಚ್ಚಿರುವಂತೆ**
**ಕನ್ನಡಿಯನ್ನು ಧೂಳು ಮುಚ್ಚಿರುವಂತೆ**
**ಭ್ರೂಣವನ್ನು ಗರ್ಭಕೋಶ ಮುಚ್ಚಿರುವಂತೆ**
**ಜ್ಞಾನವನ್ನು ಕಾಮ ಮುಚ್ಚಿಕೊಂಡಿರುತ್ತದೆ** **–ಭಗವದ್ಗೀತೆ**

ಈ ಕಾಮವೆಂಬ ತೆರೆಯನ್ನು ಹೋಗಲಾಡಿಸಲು ಮನಸ್ಸಿನಲ್ಲಿ ಮೂಲಮಂತ್ರವನ್ನು ಪ್ರತಿದಿನವೂ ಉಚ್ಚರಿಸುತ್ತಾ ಭಗವಂತನಲ್ಲಿ ಭಕ್ತಿ ಕೋರಿದರೆ ಕಾಮವು ನಶಿಸಿ ಜ್ಞಾನವು ಹೊರಹೊಮ್ಮುವುದು.

## ತಂದೆ ತಾಯಿ ಮಾಡಬೇಕಾದ ಕರ್ತವ್ಯ

ಬೆಳಗಾಗ ಎದ್ದು ಮುಖ ತೊಳೆದು ಶುಚಿಯಾಗಿ ಮನಸ್ಸಿನಲ್ಲಿ ದೇವಾಲಯವನ್ನು ಸ್ಮರಿಸಬೇಕು. ಭಗವಂತನ ಚರಣಾರವಿಂದಗಳಿಗೆ ಹೂಗಳಿಂದ ಪೂಜಿಸಿ ಮಂತ್ರವನ್ನು ಜಪಿಸಬೇಕು. ಇದರಿಂದ ಕಷ್ಟಕಾರ್ಪಣ್ಯಗಳು ತೊಲಗುತ್ತವೆ, ಕೈಗೊಳ್ಳುವ ಕಾರ್ಯ ನೆರವೇರುತ್ತದೆ. ಆತ್ಮವು ತೃಪ್ತಿ ಹೊಂದುತ್ತದೆ. ಮಕ್ಕಳಿಗೆ ಹೀಗೆ ಮಾಡಲು ಸ್ಫೂರ್ತಿ ನೀಡಿದರೆ ಅವರ ಭವಿಷ್ಯ ಸುಖಪ್ರದವಾಗಿ ಜೀವನ ಅಮೂಲ್ಯವಾಗಿ ಬದಲಾವಣೆಯಾಗುತ್ತದೆ.

**ಮನಸ್ಥೈರ್ಯದ ಕೊರತೆಯುಳ್ಳವರು ಭಗವಂತನ ಧ್ಯಾನ ಮಾಡದೆ ಒಳ್ಳೆಯ ಅವಕಾಶಕ್ಕಾಗಿ ಕಾದಿರುತ್ತಾರೆ.**